**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕೆ.ಆರ್ ನಗರ**

**ಸಿ.ಸಿ ಸಂಖ್ಯೆ: 282 / 2021**

ಪಿರ್ಯಾದಿ : ಎಸ್ ಎಲ್ ಗೌಡಪ್ಪ

ವಿರುದ್ಧ

ಆರೋಪಿ : ಸಿ ಆರ್ ಮೋಹನಕುಮಾರ

## ಆರೋಪಣೆ

ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿನಾಂಕ **13-10-2020** ರಂದು ನಿಮ್ಮ ದರದ್ದು ನಿಮಿತ್ತವಾಗಿ ರೂ. **4,25,000/-**ಗಳನ್ನು ಸಾಲ ಪಡೆದುಕೊಂಡಿದ್ದು, ಅದರ ಮರುಪಾವತಿಗಾಗಿ ಆರೋಪಿಯಾದ ನೀವು **04-08-2021** ದಿನಾಂಕವನ್ನು ನಮೂದಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆ ಆರ್ ನಗರ ಶಾಖೆಗೆ ಸೇರಿದ **4,25,000/-** ರೂಪಾಯಿಯ ಚೆಕ್ ನಂ.**190978** ಮಾಡಿ ಪಿರ್ಯಾದಿಗೆ ನೀಡಿರುತ್ತೀರಿ. ಸದರೀ ಚೆಕ್ಕನ್ನು ನಗದೀಕರಿಸಲು ಪಿರ್ಯಾದಿಯವರು ದಿ: **04-08-2021** ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆ ಆರ್ ನಗರ ಶಾಖೆಗೆ ಸದರೀ ಚೆಕ್ ನ್ನು ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕೆ ತಿರಸ್ಕೃತಗೊಂಡು ದಿನಾಂಕ **04-08-2021** ರಂದು ವಾಪಸ್ಸಾಗಿರುತ್ತದೆ. ನಂತರ ಪಿರ್ಯಾದಿಯವರು ವಕೀಲರ ಮುಖಾಂತರ ದಿ: **18-08-2021** ರಂದು ಅಂಚೆ ಮೂಲಕ ಚೆಕ್ ಹಣ ಪಾವತಿಸುವಂತೆ ತಗಾದೆ ಮಾಡಲಾಗಿರುತ್ತದೆ. ನಂತರವೂ ಸಹ ನೀವು ಹಣವನ್ನು ಪಿರ್ಯಾದುದಾರರಿಗೆ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯಾದ ನೀವು ಕಲಂ.**138** ಎನ್.ಐ. ಕಾಯ್ದೆ ಯಡಿ ಶಿಕ್ಷಿಸಲ್ಪಡಬಹುದಾದಂತಹ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ಆರೋಪಣೆ ಇರುತ್ತದೆ.

ಪ್ರಶ್ನೆ **1)** ಈಗ ಕನ್ನಡದಲ್ಲಿ ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಯಿತೆ ?

ಉತ್ತರ: ಹೌದು. ಅರ್ಥವಾಯಿತು.

ಪ್ರಶ್ನೆ **2)** ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?

ಉತ್ತರ: ಇಲ್ಲ. ವಿಚಾರಣೆ ಮಾಡಿ.

ಆರೋಪಿಯ ವಿರುದ್ಧ ಆರೋಪಣೆ ರಚಿಸಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

[signature] 21/5/22

ದಿನಾಂಕ: **20-05-2022**

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಕೃಷ್ಣರಾಜನಗರ.

[signature]